**2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಪಾಂಡವಪುರ**

ಸಿ.ಸಿ. ನಂಬ್ರ: **96/2021** ಸಿ.ಡಬ್ಲ್ಯೂ: **2** ಪಿ.ಡಬ್ಲ್ಯೂ: **2**

ಸಾಕ್ಷಿದಾರರ ಹೇಳಿಕೆಗಳು **-**

ಸಾಕ್ಷಿಯ ಹೆಸರು - ವಿಜಯಕುಮಾರ
ತಂದೆಯ ಹೆಸರು - ಜಯರಾಮೇಗೌಡ
ವಯಸ್ಸು - 38 ವರ್ಷ
ಉದ್ಯೋಗ - ಗಾರೆ ಕೆಲಸ
ವಾಸ ಸ್ಥಳ - ಗೆರಸನಹಳ್ಳಿ ಗ್ರಾಮ,
ಬಿಳಿಕೆರೆ ಹೋಬಳಿ, ಹುಣಸೂರು ತಾಲೂಕು.

ದಿನಾಂಕ: 10-07-2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ:
ಚಾಸಾ-1 ಗೊತ್ತು, ಚಾಸಾ-3 ರಿಂದ 5 ಗೊತ್ತು.

ದಿನಾಂಕ 16.11.2020 ರಂದು ಬೆಳಿಗ್ಗೆ 7.30-8.00 ಗಂಟೆ ಸಮಯದಲ್ಲಿ ನಾನು, ಚಾಸಾ-1, 3 ರಿಂದ 6 ಮತ್ತು ಮೃತ ಮನುಕುಮಾರ, 3 ಸ್ಕೂಟರಗಳಲ್ಲಿ ಆದಿಚುಂಚನಗಿರಿ ದೇವಸ್ಥಾನಕ್ಕೆ ಹೋಗುತ್ತಿದ್ದೇವು. ದೇವಸ್ಥಾನಕ್ಕೆ ಹೋಗಿ ದರ್ಶನ ಮುಗಿಸಿಕೊಂಡು ಮಧ್ಯಾಹ್ನ 2.00 ಗಂಟೆಗೆ ವಾಪಸು ನಮ್ಮ ಊರಿಗೆ ಚಾಸಾ-1 ಮತ್ತು ಮನುಕುಮಾರ ಒಂದು ಸ್ಕೂಟರನ್ನು ಸವಾರಿ ಮನುಕುಮಾರ ಮಾಡುತ್ತಿದ್ದು, ಚಾಸಾ-1 ಹಿಂಬದಿ ಸವಾರನಾಗಿ ಜಕ್ಕನಹಳ್ಳಿ ಕ್ರಾಸ್ ಬಳಿ ಬರುತ್ತಿದ್ದಾಗ, ನಾನು ಮತ್ತು ಪುನೀತಕುಮಾರ ಒಂದು ಗಾಡಿಯಲ್ಲಿ ಬರುತಿದ್ದು, ಆ ಗಾಡಿಯನ್ನು ನಾನು ಓಡಿಸುತಿದ್ದು, ನಮ್ಮ ಮುಂದೆ ಮನುಕುಮಾರ ಮತ್ತು ಚಾಸಾ-1 ರವರ ಗಾಡಿ ಹೋಗುತಿದ್ದು, ಜಕ್ಕನಹಳ್ಳಿ ಕ್ರಾಸ್ ಬಳಿ ಪ್ಯಾಷನ್ ಪ್ಲಸ್ ಬೈಕೊಂದು ಮೇಲುಕೋಟೆಯಿಂದ ಮಂಡ್ಯ ಕಡೆಗೆ ರಾಂಗ್ ಸೈಡಿನಲ್ಲಿ ಬಂದು ಮನುಕುಮಾರ

ಹೋಗುತ್ತಿರುವ ಸ್ಕೂಟರಗೆ ಡಿಕ್ಕಿಪಡಿಸಿದಾಗ ಮನುಕುಮಾರರವರ ಸ್ಕೂಟರ್ ಪಲ್ಟಿ ಹೊಡೆದು ಮನುಕುಮಾರಗೆ ತಲೆಗೆ ಗಾಯಗಳಾಗಿದ್ದು, ಚಾಸಾ-1 ರವರು ಸಣ್ಣ ಪುಟ್ಟ ಗಾಯಗಳಾಗಿದ್ದು ಪ್ರಜ್ಞೆಯನ್ನು ಕಳೆದುಕೊಂಡಿರುತ್ತಾರೆ. ನಾವು ಹಿಂದೆಯೇ ಬಂದು ಚಾಸಾ-1 ರವರಿಗೆ ಉಪಚರಿಸಿದೆವು. ಅವರಿಗೆ ಪ್ರಜ್ಞೆ ಬಂದಿರುತ್ತದೆ. ಅಲ್ಲಿದ್ದ ಸಾರ್ವಜನಿಕರು ಆ್ಯಂಬುಲೆನ್ಸ ಫೋನ್ ಮಾಡಿದ್ದು, ಮನುಕುಮಾರನನ್ನು ಚಿಕಿತ್ಸೆಗಾಗಿ ಆ್ಯಂಬುಲೆನ್ಸನಲ್ಲಿ ಆಸ್ಪತ್ರೆಗೆ ಚಾಸಾ-5 ಮತ್ತು 6 ರವರು ಕರೆದುಕೊಂಡು ಹೋಗಿರುತ್ತಾರೆ. ಈ ಅಪಘಾತವು ಸ್ಪ್ಲೇಂಡರ್ ಪ್ಲಸ್ ಬೈಕಿನ ಸವಾರನ ತಪ್ಪಿನಿಂದ ಆಗಿರುತ್ತದೆ. ಅಲ್ಲಿ ನೆರೆದಿದ್ದ ಜನರು ಪೋಲಿಸರಿಗೆ ಅಪಘಾತದ ವಿಚಾರವನ್ನು ತಿಳಿಸಿದರು, ನಂತರ ಅಲ್ಲಿಗೆ ಪೋಲಿಸರು ಬಂದು ಅಪಘಾತವಾಗಿರುವ ಮತ್ತು ಮಾಡಿರುವ 2 ಬೈಕುಗಳನ್ನು ತೆಗೆದುಕೊಂಡು ಠಾಣೆಗೆ ಹೋಗಿರುತ್ತಾರೆ. ಚಾಸಾ-1 ರವರು ದೂರನ್ನು ಕೊಟ್ಟಿರುತ್ತಾರೆ.

2. ಠಾಣೆಯಿಂದ ಸೆಂಟ್ ಜೋಸೆಫ್ ಆಸ್ಪತ್ರೆಗೆ ಹೋಗಿ ಮನುಕುಮಾರನನ್ನು ನೋಡಿಕೊಂಡು ಮನೆಗೆ ಹೋದೆವು, ಮರುದಿನ ಪೋಲಿಸರು ಅಪಘಾತವಾದ ಸ್ತಳದಲ್ಲಿ ಮಹಜರ ಮಾಡಬೇಕೆಂದು ನಮ್ಮನ್ನು ಕರೆಸಿರುತ್ತಾರೆ. ನಾನು, ಚಾಸಾ-1, 6 ರವರು ಅಪಘಾತ ಸ್ಥಳಕ್ಕೆ ಬಂದೆವು. ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ಮಹಜರ ಮಾಡಿರುತ್ತಾರೆ. ಸಾಕ್ಷಿ ಈಗಾಗಲೇ ಗುರುತಿಸಲಾದ ನಿಪಿ-2 ರಲ್ಲಿರುವ ಮಹಜರನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಹಿಯನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು. ಮಹಜರ ಮಾಡುವ ಸಮಯದಲ್ಲಿ ವಾಹನಗಳನ್ನು ತೆಗೆದುಕೊಂಡಿರುವುದಿಲ್ಲ, ಅಪಘಾತವಾದ ದಿನದಂದೇ ಪೋಲಿಸರು ವಾಹನಗಳನ್ನು ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ. ನಾನು ಈ ಘಟನೆಯ ಬಗ್ಗೆ ಹೇಳಿಕೆಯನ್ನು ಮತ್ತು ಮನುಕುಮಾರ ಮೃತಪಟ್ಟ ನಂತರ ಮರುಹೇಳಿಕೆಯನ್ನು ನೀಡಿರುತ್ತೇನೆ.

3. ದಿನಾಂಕ 23.11.2021 ರಂದು ಮನುಕುಮಾರು ಸಿ ಇ ಜಿ ಆಸ್ಪತ್ರೆಯಲ್ಲಿ ಮೃತ ಹೊಂದಿರುತ್ತಾರೆ. ಈ ಬಗ್ಗೆ ನಾನು ಮರುಹೇಳಿಕೆಯನ್ನು ನೀಡಿರುತ್ತೇನೆ.

ಅಪಘಾತಪಡಿಸಿದ ವಾಹನದ ಸವಾರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿದರು.

(ಈ ಹಂತದಲ್ಲಿ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕು ಎಂದು ಮಾನ್ಯ ಸ.ಸ.ಅ. ರವರು ವಿನಂತಿಸಿಕೊಂಡ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

<u>ಪಾಟಿ ಸವಾಲು ಮಾನ್ಯ ಸ ಸ ಅ ರವರಿಂದಃ-</u>

ಮನುಕುಮಾರ ಹೋಗುತ್ತಿರುವ ಬೈಕ್ ನಂಬರ ಕೆಎ-45 ಬಿ-0420 ಆಗಿರುತ್ತದೆ ಎಂದರೆ ಸರಿ. ಆರೋಪಿಯ ಬೈಕ್ ನಂಬರ ಕೆಎ-54 ಇ-1749 ಎಂದರೆ ಸರಿ.

ಮಹಜರ ದಿನಾಂಕ 17.11.2020 ಬೆಳಿಗ್ಗೆ 6.00 ರಿಂದ 7.00 ರವರೆಗೂ ಮಾಡಲಾಗಿರುತ್ತದೆ ಹಾಗೂ ಸದರಿ ಸಮಯಗಳಲ್ಲಿ 2 ವಾಹನಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

<u>ಪಾಟಿ ಸವಾಲು ಆರೋಪಿ ಪರ ವಕೀಲರಾದ ಶ್ರೀ ಎಂ ಬಿ ಎನ್ ವಕೀಲರಿಂದಃ-</u>

ಚಾಸಾ-1, 3 ರಿಂದ 6 ರವರು ಒಂದೇ ಗ್ರಾಮದವರಾಗಿದ್ದು ಸ್ನೇಹಿತರು ಎಂದರೆ ಸರಿ. ನಾವು ಆದಿಚುಂಚನಗಿರಿ ದೇವಸ್ಥಾನವನ್ನು ಮಧ್ಯಾಹ್ನದ ಮೇಲೆ ಬಿಟ್ಟಿರುತ್ತೇವೆ, ನನಗೆ ನಿರ್ದಿಷ್ಟವಾದ ಸಮಯ ಗೊತ್ತಿಲ್ಲ, ನಾನು ಮತ್ತು ಚಾಸಾ-3 ರವರು ಒಂದು ಬೈಕಿನಲ್ಲಿ ಬರುತ್ತಿದ್ದೇವು. ಚಾಸಾ-5 ಮತ್ತು 6 ರವರು ಬೈಕು ಎಲ್ಲರಿಗಿಂತ ಮೊದಲು ಸ್ವಲ್ಪ ಹಿಂದೆ 1 ಕಿ ಮೀ ದೂರದಲ್ಲಿ ಮನುಕುಮಾರ ಮತ್ತು ಚಾಸಾ-1 ರವರು ಹೋಗುತ್ತಿರುವ ಬೈಕು ಇತ್ತು, ಅವರ ಬೈಕಿನ 100 ಅಡಿಗಳ ಹಿಂದೆ ನಾನು ಮತ್ತು ಚಾಸಾ-3 ರವರು ಹೋಗುತ್ತಿರುವ ಬೈಕು ಇತ್ತು.

2. ಆದಿಚುಂಚನಗಿರಿಯಿಂದ ಮೈಸೂರಿನ ರಸ್ತೆಯು ಹೆಚ್ಚಿನ ವಾಹನಗಳು ಓಡಾಡುವ ಬ್ಯುಸಿ ರಸ್ತೆಯಾಗಿರುತ್ತದೆ ಎಂದರೆ ಸರಿ. ಬಿ ಜಿ ನಗರದಿಂದ ಜಕ್ಕನಹಳ್ಳಿ ಕ್ರಾಸ್ ನವರೆಗೂ ದ್ವಿಮುಖ ರಸ್ತೆಯಾಗಿದ್ದು, ಮಧ್ಯೆ ಯಾವುದೇ ಡಿವೈಡರ್ ಇರುವುದಿಲ್ಲ ಎಂದರೆ ಸರಿ. ಜಕ್ಕನಹಳ್ಳಿ ಸರ್ಕಲಿಗೆ ಸುಮಾರು 3.30- 4.00 ಗಂಟೆಗೆ ಬಂದಿರುತ್ತೇವೆ.

3. ಜಕ್ಕನಹಳ್ಳಿ ರಸ್ತೆ ಉತ್ತರ ದಕ್ಷಿಣ ಮುಖವಾಗಿ ಇದೆ ಎಂದರೆ ಸಾಕ್ಷಿಯು ಸ್ವಲ್ಪ ಕ್ರಾಸ್ ರಸ್ತೆ ಇರುತ್ತದೆ ಎಂದು ಉತ್ತರಿಸಿದರು. ಜಕ್ಕನಹಳ್ಳಿ ಸರ್ಕಲಿಗೆ ಬಿ ಜಿ ನಗರ, ಶ್ರವಣಬೆಳಗೊಳ, ಮೇಲುಕೋಟೆಯಿಂದ, ಮಂಡ್ಯದಿಂದ, ಮೈಸೂರಿನಿಂದ ಬರುವ

ವಾಹನಗಳು ಒಟ್ಟಿಗೆ ಸೇರುತ್ತವೆ ಎಂದರೆ ಸರಿ. ಜಕ್ಕನಹಳ್ಳಿ ಸರ್ಕಲ್ ಬಳಿ ಗಣಪತಿ ದೇವಸ್ಥಾನ ಇದೆ ಎಂದರೆ ಸರಿ. ಗಣಪತಿ ದೇವಸ್ಥಾನದ ಪಶ್ಚಿಮಕ್ಕೆ ಮೇಲುಕೋಟೆ ರಸ್ತೆ ಬರುತ್ತದೆ ಎಂದರೆ ಸಾಕ್ಷಿ ಪೂರ್ವ ದಿಕ್ಕಿಗೆ ಬರುತ್ತದೆ ಎಂದು ಉತ್ತರಿಸಿದರು. ಗಣಪತಿ ದೇವಸ್ಥಾನದ ಪಕ್ಕದಲ್ಲಿ ನಾಗಮಂಗಲ ಮೈಸೂರು ರಸ್ತೆ ಇದೆ ಎಂದರೆ ಸರಿ. ಜಕ್ಕನಹಳ್ಳಿ ಸರ್ಕಲ್ ಬಳಿ ನಾಗಮಂಗಲ ಮೈಸೂರು ರಸ್ತೆಯು 160 ಅಡಿ ಅಗಲದ ರಸ್ತೆ ಇರುತ್ತದೆ ಎಂದರೆ ಸರಿ. ಜಕ್ಕನಹಳ್ಳಿ ಕ್ರಾಸ್ ಬಳಿ ರಸ್ತೆಗಳ ಮಧ್ಯೆ ಭಾಗದಲ್ಲಿ ಡಿವೈಡರ್ ನ್ನು ಅಳವಡಿಸಲಾಗಿದೆ ಎಂದರೆ ಸರಿ. ಮೇಲುಕೋಟೆಯಿಂದ ಬರುವ ವಾಹನಗಳು ಮಂಡ್ಯಕ್ಕೆ ಹೋಗಬೇಕಾದರೆ ಡಿವೈಡರ್ ನ್ನು ದಾಟಿಕೊಂಡು ಹೋಗಬೇಕು ಎಂದರೆ ಸರಿ. ಮಂಡ್ಯ ರಸ್ತೆಗೆ ಹೋಗಲು ಸದರಿ ರಸ್ತೆಯ ಬಳಿ ಡಿವೈಡರ್ ತೆರೆಯಲಾಗಿರುತ್ತದೆ ಎಂದರೆ ಸರಿ.

4. ಅಪಘಾತವಾದ ಸ್ಥಳದ ನೇರವಾಗಿ ಡಿವೈಡರ್ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿಯು ಮಂಡ್ಯಗೆ ಹೋಗಬೇಕಾದರೆ ಅಪಘಾತವಾದ ಸ್ಥಳದಲ್ಲಿ ವಾಹನವನ್ನು ತಿರುಗಿಸಬೇಕಾಗಿಲ್ಲ, ಇನ್ನೂ ಮುಂದೆ ಹೋಗಿ ತಿರುಗಿಸಬೇಕು ಎಂದರೆ ಸರಿಯಲ್ಲ. ಮೇಲುಕೋಟೆಯಿಂದ ಮಂಡ್ಯಗೆ ಹೋಗಲು ತಿರುವಿನ ರಸ್ತೆಯ ಇನ್ನೂ ಹಿಂಭಾಗವೇ ಅಪಘಾತವಾಗಿದೆ ಎಂದರೆ ಸರಿ. ಆರೋಪಿಯ ತಪ್ಪಿನಿಂದ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾಗಮಂಗಲ ರಸ್ತೆಯಿಂದ ಪೂರ್ವ ದಿಕ್ಕಿಗೆ ಸುಮಾರು 15 ಅಡಿ ಸರ್ವಿಸ್ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ.

5. ಅಪಘಾತವಾಗಿದೆ ಎನ್ನುವ ಸ್ಥಳದಲ್ಲಿ ಅಂಗಡಿ ಮುಗ್ಗಟ್ಟುಗಳು ಇವೆ ಎಂದರೆ ಸರಿ. ಜಕ್ಕನಹಳ್ಳಿ ಸರ್ಕಲಾಗಿರುವ ಕಾರಣ ಹೆಚ್ಚಿನ ವಾಹನಗಳು, ಜನಸಂದಣಿ ಇರುತ್ತದೆ ಎಂದರೆ ಸಾಕ್ಷಿಯು ದೀಪಾವಳಿ ಹಬ್ಬವಾದ ಕಾರಣ ಅಷ್ಟಾಗಿ ಜನಸಂದಣಿ ಇರಲಿಲ್ಲ. ಅಪಘಾತವಾದಾಗ ಸುಮಾರು 60 ರಿಂದ 70 ಜನ ಇದ್ದರು. ಮೃತ ಮನುಕುಮಾರ ವಾಹನದ ಮುಂಚೆ ಸ್ಕೂಟರನಲ್ಲಿ ಹೋಗಿರುವ ಚಾಸಾ-5, 6 ರವರಿಗೆ ಅಪಘಾತದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ.

6. ನಮ್ಮ ಸ್ಕೂಟರ ಮತ್ತು ಮನುಕುಮಾರವರ ಸ್ಕೂಟರ ಮುಂದೆ ಯಾವುದೇ ವಾಹನಗಳು ಹೋಗುತ್ತಿರುವುದಿಲ್ಲ, ಅಪಘಾತ ಸ್ಥಳದಲ್ಲಿ ಸುಮಾರು ಜನರು ಸೇರಿದ್ದರು ಎಂದರೆ ಸರಿ.

ನಾನು ಅಪಘಾತ ಸ್ಥಳದಲ್ಲಿ ಇರಲಿಲ್ಲ, ಮೃತ ಮನುಕುಮಾರ ನಮ್ಮ ಗ್ರಾಮದವರು ಎಂದು ನಾನು ಹೋಗಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಮನುಕುಮಾರ ವಾಹನವನ್ನು ಅಡ್ಡಾದಿಡ್ಡಿಯಾಗಿ ಓಡಿಸಿಕೊಂಡು ಬಂದು ಅಪಘಾತವಾಗಿರುತ್ತದೆ ಹೊರತು ಆರೋಪಿಯ ತಪ್ಪಿನಿಂದ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಪರಿಹಾರ ಕೋರಿ ಮನುಕುಮಾರನ ಕುಟುಂಬದವರು ಮೈಸೂರು ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಅಪಘಾತದ ಪ್ರಕರಣಕ್ಕೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ಅಪಘಾತವಾದ ಮರುದಿನವೇ ಸ್ಥಳ ಮಹಜರನ್ನು ಮಾಡಿರುತ್ತಾರೆ. ಬೆಳಿಗ್ಗೆ 8.30 ರಿಂದ 9.00 ಗಂಟೆಗೆ ಮಹಜರಗೆ ಬಂದಿರುತ್ತೇವೆ, ಎಷ್ಟು ಹೊತ್ತು ಮಹಜರ ಮಾಡಿದರು ಎಂದು ನನಗೆ ಗೊತ್ತಿಲ್ಲ. ಮಹಜರ ಮಾಡುವಾಗ ಅಕ್ಕಪಕ್ಕದ ಅಂಗಡಿಯವರನ್ನು ಕರೆಸಿ ಮಹಜರ ಮಾಡಿರುತ್ತಾರೆ. ಸ್ಥಳೀಯರು ಯಾರು ಮಹಜರಗೆ ಸಹಿ ಮಾಡಿರುವುದಿಲ್ಲ. ಸ್ಥಳದಲ್ಲಿ ಮಹಜರ ಮಾಡಿರುವುದಿಲ್ಲ, ಠಾಣೆಯಲ್ಲಿ ಮಹಜರ ಮಾಡಿರುತ್ತಾರೆ, ಅದಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

8. ಆರೋಪಿ ಬರುತ್ತಿರುವ ವಾಹನದ ಸ್ವಲ್ಪ ದೂರದಲ್ಲಿ ಟ್ರ್ಯಾಕ್ಟರ್ ಬರುತ್ತಿತ್ತು. ಜಕ್ಕನಹಳ್ಳಿ ಸರ್ಕಲ್ ಇದ್ದ ಕಾರಣ ವಾಹನವನ್ನು ಅತಿ ವೇಗವಾಗಿ ಚಲಾಯಿಸಲು ಆಗುವುದಿಲ್ಲ ಎಂದರೆ ಸಾಕ್ಷಿ ಆರೋಪಿ ನಿಯಮಗಳನ್ನು ಪಾಲನೆ ಮಾಡದೇ ರಾಂಗ್ ಆಗಿ ಬಂದು ಅಪಘಾತ ಮಾಡಿರುತ್ತಾರೆ. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ, ಆರೋಪಿಯ ತಪ್ಪಿನಿಂದ ಅಪಘಾತವಾಗಿರುವುದಿಲ್ಲ, ಮನುಕುಮಾರವರ ಕುಟುಂಬಕ್ಕೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದರು

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ
ಎಂ ಎಫ್ ಸಿ, ನ್ಯಾಯಾಲಯ, ಪಾಂಡವಪುರ